ಶತಮಾನಗಳ ಆಧುನಿಕ ಹಾಗೂ ಚರಿತ್ರೆಯ ಜಗತ್ತಿನ ಅನುಭವಗಳವರೆಗೆ ಈ ಪದ್ಯಗಳು ಚಾಚಿಕೊಂಡಿವೆ. ಜರ್ಮನ್ ನಾಜಿಗಳಿಂದ ನಡೆದ ಯಹೂದಿಗಳ ಮಾರಣಹೋಮದ ಬಗೆಗಿನ ಅದ್ಭುತವಾದ ಪದ್ಯ ಇಲ್ಲಿದೆ. ಲಕ್ಷಗಟ್ಟಲೆ ಯಹೂದಿಗಳನ್ನು ಕೊಂದ ಯಾತನಾ ಶಿಬಿರಗಳ ಹೆಬ್ಬಾಗಿಲಿನ ಮೇಲೆ 'ದುಡಿತ ಜನರನ್ನು ಮುಕ್ತರನ್ನಾಗಿ ಮಾಡುತ್ತದೆ' ಎಂದು ಬರೆಯಲಾಗಿತ್ತು. ಅಲ್ಲಿಯ ದುಡಿತವೆಂದರೆ ಕುಣಿಗಳನ್ನು ತೋಡುವುದೂ ಆಗಿತ್ತು.

'ನಿಮ್ಮ ಸ್ವಂತ ಕುಣಿಯೂ ಬರುತ್ತದೆ ಸರದಿ ಪ್ರಕಾರ'

ಎನ್ನುವ ಒಂದು ಸಾಲು ಮನುಷ್ಯ ಚರಿತ್ರೆಯ ಕರಾಳವಾದ ವಿದ್ಯಮಾನವೊಂದರ ಸಂಕ್ಷಿಪ್ತ ಸಾರಾಂಶವಾಗುತ್ತದೆ. ಹಾಗೆಯೇ ಇನ್ನೊಂದು ಪದ್ಯದಲ್ಲಿ ಸಾವಿರಾರು ಜನರನ್ನು ಶುದ್ಧೀಕರಣ (purge) ಮೂಲಕ ಕೊಲ್ಲಿಸುವ ಅಥವಾ ಸೈಬೀರಿಯಾಕ್ಕೆ ಕಳಿಸುವ ಸ್ಟಾಲಿನ್, ಆ ಜನರ ವಿಚಾರಣೆಗೆ ಪ್ರಸಿದ್ಧ ಬರಹಗಾರರು, ಕವಿಗಳು ಇಂಥವರನ್ನು ಕರೆಸುತ್ತಿದ್ದನಂತೆ. ಅವರು ಇದು ಎಷ್ಟು ನ್ಯಾಯಪರವೆಂದು ವರ್ಣಿಸುತ್ತಿದ್ದರಂತೆ. ಇದೇ ವಸ್ತುವಿನ ಕುರಿತ ಇನ್ನೊಂದು ಪದ್ಯದಲ್ಲಿ (ಮಹಾ ಪರ್ಜ್ 1937) ಲೋಕಹಿತಕ್ಕಾಗಿ ಮನುಷ್ಯ ಜೀವಿಗಳನ್ನು ಕೊಲ್ಲುವ ವಿವರಗಳಿವೆ. ಮತ್ತೊಂದು ಪದ್ಯದಲ್ಲಿ, ತೈಮೂರನು ತನ್ನ ಧರ್ಮದವರನ್ನೂ ಕೊಲೆ ಮಾಡಿಸಿದ್ದರಿಂದ ಅವನು ಧರ್ಮಾಂಧನಲ್ಲ ಎಂದು ವಾದಿಸುವ ಸಿದ್ಧಾಂತಗಳ ಬಗ್ಗೆ ವ್ಯಂಗ್ಯವಿದೆ. ಹಾಗೆ ನೋಡಿದರೆ ಕವನ ಸಂಕಲನವು ಇಂಥ ವಿದ್ಯಮಾನಗಳ ಚಿಕ್ಕ ವಿಶ್ವಕೋಶದಂತಿದೆ. ಇವು ಕೇವಲ ವಿವರಗಳಲ್ಲ. ಗಾಢವಾದ ಚಿಂತನೆಯ ವಸ್ತುಗಳಾಗಿವೆ – ಹಿಂಸೆ, ಕ್ರೌರ್ಯ ಮತ್ತು ಸಿದ್ಧಾಂತಗಳ ಸಂಬಂಧವೇನು? ಯಾಕೆ ಮನುಷ್ಯ ನಾಗರಿಕತೆಯು ನಿತ್ಯವೂ ಹೊಸ ಬಗೆಯ ಹಿಂಸೆಯ ನಿರಂತರ ಅವಿಷ್ಕಾರವಾಗಿದೆ ಎನ್ನುವ ಬಗೆಗಿನ ಧ್ಯಾನದ ವಸ್ತುವಾಗಿದೆ. ಅಲ್ಲದೆ ಚರಿತ್ರೆಯಿಂದ ನಾವು ಏನನ್ನೂ ಕಲಿತಿಲ್ಲವೆನ್ನುವ ವಿಷಾದವೂ ಇಲ್ಲಿದೆ.

ಸಮಯವು ಬೆರಳ ಸಂದಿಗಳ ನಡುವಿನಿಂದ ಜಾರಿಹೋಗುತ್ತಿದೆ ಎನ್ನುವ ಎಚ್ಚರದಲ್ಲಿ ಬಾಲ್ಯದ ನೆನಪುಗಳು ಗಾಢವಾಗಿ ಮರುಕಳಿಸುತ್ತವೆ. ಮನೆಯ ಸುತ್ತಲಿನ ತೋಟ, ಆಚೆಗಿನ ಕಾಡು, ಗುಡಿಗಳು ಇವೆಲ್ಲವು ಮತ್ತೆ ಕಾವ್ಯವಿಶ್ವದಲ್ಲಿ ಹಾಜರಾಗುತ್ತವೆ.



ಮುಗಿಯುತ್ತ ಬಂದ ಜೀವನದ ಖಾನೇಸುಮಾರಿಯಲ್ಲಿ ಅವುಗಳದು ದೊಡ್ಡ ಪಾತ್ರವಿದೆ.

ಜೀವನ ಇರುವವರು ಜೀವನ ಚರಿತ್ರೆ ಬರೀತಾರೆ.
ಆತ್ಮ ಇರುವವರು ಆತ್ಮಚರಿತ್ರೆ
ನಾನೇನು ಬರೆಯಲಿ
ಇವೆರಡೂ ಇಲ್ಲದವನು

ಇದೊಂದು ಭರತವಾಕ್ಯವಾದರೆ ಇನ್ನೊಂದು ಹೀಗಿದೆ:

ಚರಿತ್ರೆ ಬರೆಯಲು ಕೇಳಬೇಡಿ ನನ್ನನ್ನು
ಚರಿತ್ರೆ ಬರೆಯಲು ಹೊರಟಿಲ್ಲ ನಾನು
ನಾನು ಸೋತವರ ಪಾರ್ಟಿ
ಸೋತವರು
ಚರಿತ್ರೆನ ಬರೆಯುವುದಿಲ್ಲ
ಸೋತವರು ಬರೆಯುವುದು ಕವಿತೆ

ಆದರೆ, ಈ ಸಂಕಲನದ ಕವನಗಳ ಉದ್ದಕ್ಕೂ ಚರಿತ್ರೆಯೂ ಇದೆ, ಜೀವನವೂ ಇದೆ. ಹೀಗೇ ಇರಬೇಕಲ್ಲವೆ? ●